Reg. No. : ....................................

Name : .......................................

**Code No. 7041**

**Second Year – JUNE 2017**
**SAY/IMPROVEMENT**

Time : 2 ½ Hours
Cool-off time : 15 Minutes

**Part – III**

## KANNADA (Optional)

Maximum : 80 Scores

***General Instructions to Candidates :***

- There is a 'cool-off time' of 15 minutes in addition to the writing time of 2 ½ hrs.
- You are not allowed to write your answers nor to discuss anything with others during the 'cool-off time'.
- Use the 'cool off time' to get familiar with questions and to plan your answers.
- Read questions carefully before answering.
- All questions are compulsory and only internal choice is allowed.
- When you select a question, all the sub-questions must be answered from the same question itself.
- Electronic devices except non-programmable calculators are not allowed in the Examination Hall.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಪರೀಕ್ಷೆ ಬರೆಯಲು ಬೇಕಾದ 2 ½ ಗಂಟೆಗಳ ಸಮಯವಲ್ಲದೆ 15 ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ಕೊಡಲಾಗಿದೆ.
- 'ಕೂಲ್ ಆಫ್ ಸಮಯ' ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಯೋಚಿಸುವುದಕ್ಕೆ ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಎಲ್ಲಾ ಪ್ರಶ್ನೆಗಳೂ ಕಡ್ಡಾಯವಾಗಿವೆ ಮತ್ತು ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಎತ್ತಿಕೊಂಡಾಗ, ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸತಕ್ಕದ್ದು.
- 'ನಾನ್ ಪ್ರೋಗ್ರಾಮೇಬಲ್' ಗಳ ಹೊರತು ಬೇರೆ ಯಾವುದೇ ಇಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ತರಬಾರದು.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.)**

1. ಕವಿತಾಗುಣಾರ್ಣವ ಇದು ಯಾರ ಬಿರುದು ?
   (ಲಕ್ಷ್ಮೀಶ, ರನ್ನ, ಹರಿಹರ, ಪಂಪ) **(Score : 1)**

2. 'ಮಾಲೆಗಾರ' – ಇಲ್ಲಿರುವ ಪ್ರತ್ಯಯ ಯಾವುದು ?
   (ತದ್ಧಿತ ಪ್ರತ್ಯಯ, ವಿಭಕ್ತಿ ಪ್ರತ್ಯಯ, ಕಾಲವಾಚಕ ಪ್ರತ್ಯಯ, ಆಖ್ಯಾತ ಪ್ರತ್ಯಯ) **(Score : 1)**

3. ಈ ಕೆಳಗಿನವುಗಳಲ್ಲಿ ಬಹುವ್ರೀಹಿ ಸಮಾಸ ಯಾವುದು ?
   (ಹೊಂದಾವರ, ನಟ್ಟಿರುಳು, ಮೊಳೆವಿತ್ತು, ಕಮಲಲೋಚನ) **(Score : 1)**

4. ಭರತೇಶ ವೈಭವ ಕೃತಿಯ ಕರ್ತೃ ಯಾರು ?
   (ರತ್ನಾಕರ ವರ್ಣಿ, ಹರಿಹರ, ರಾಘವಾಂಕ, ಲಕ್ಷ್ಮೀಶ) **(Score : 1)**

**(5 ರಿಂದ 12 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ)**

5. 'ಧ್ಯಾನ' – ಈ ಪದದ ತದ್ಭವ ರೂಪವನ್ನು ಬರೆಯಿರಿ. **(Score : 1)**

6. 'ಇಳೆ' – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ. **(Score : 1)**

7. 'ಜಾಗೃತಿ' – ಈ ಪದವನ್ನು ಬಳಸಿ ವಾಕ್ಯವೊಂದನ್ನು ರಚಿಸಿರಿ. **(Score : 1)**

8. 'ಮಾಮರ' – ಈ ಪದವನ್ನು ವಿಗ್ರಹಿಸಿ ಬರೆಯಿರಿ. **(Score : 1)**

9. 'ಕಾರ್ಮುಕ' – ಈ ಪದದ ಅರ್ಥ ಬರೆಯಿರಿ. **(Score : 1)**

10. 'ತುಳು' ಯಾವ ಭಾಷಾ ವರ್ಗಕ್ಕೆ ಸೇರಿದೆ ? **(Score : 1)**

11. 'ಮಾಡು' – ಇದರ ನಿಷೇದಾರ್ಥಕ ರೂಪ ಯಾವುದು ? **(Score : 1)**

12. 'ಅಮೃತಮಯವೆನಿಸುವೋಗರವ' – ಈ ಪದವನ್ನು ವಿಂಗಡಿಸಿ ಬರೆಯಿರಿ. **(Score : 1)**

(13 ರಿಂದ 24 ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.)

13. ಸ್ವಯಂವರಕ್ಕೆ ಆಗಮಿಸಿದ ಋಷಿಗಳನ್ನು ಶ್ರೀಮತಿಯು ವರಿಸದಿರಲು ಕಾರಣವೇನು ? **(Scores : 2)**

14. ಅನುಪಮಾ ನಿರಂಜನರ ಬರವಣಿಗೆ ಹೊಸ ತಿರುವು ಪಡೆದುದರ ಬಗ್ಗೆ ತಿಳಿಸಿರಿ. **(Scores : 3)**

15. 'ತುಳುವಿಗೆ ಶಿಷ್ಟಸಾಹಿತ್ಯ ಪರಂಪರೆ ಇತ್ತು' ಎಂಬುದಕ್ಕೆ ಆಧಾರಗಳೇನು ? **(Scores : 4)**

16. ವೃದ್ಧ ವಿಪ್ರನ ಹಸಿವೆಯನ್ನು ಹೋಗಲಾಡಿಸಲು ಇಳೆಯಾಂಡ ಗುಡಿಮಾರನ ಪತ್ನಿಯು ನೀಡಿದ ಸಲಹೆಯೇನು ? **(Scores : 4)**

17. ಕೆಳಗಿನ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ.

ನಿನ್ನಯ ತಾಯ್ ಸಾತ್ವತಿಯುಂ
ನಿನ್ನಂ ತಂದೆನ್ನ ತೊಡೆಯಮೇಲಿರಿಟೆ ಪುವುದುಂ
ನಿನ್ನ ಲಲಾಟದ ಕಣ್ಣದು
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೈಯೊಳ್ **(Scores : 4)**

18. ಕೆಳಗೆ ಕೊಡಲಾದ ಪದ್ಯಭಾಗದಲ್ಲಿ ಬಳಕೆಯಾದ ಅಲಂಕಾರವನ್ನು ಗುರುತಿಸಿ ಲಕ್ಷಣವನ್ನು ಬರೆಯಿರಿ.

ತಂದೆಗಳಿಬ್ಬರಂಕವ ಕಾಣ್ಬ ಪಾತಕ
ಬಂದಿತೆಯೆಂದುಚಿಂತಿಸುತ |
ನಿಂದಿರ್ದ ಕುವರರ ಮೊಗಕಾಂತಿವಡೆದುವು
ಹೊಂದಾವರೆಯರಲ್ವಂತೆ **(Scores : 5)**

19. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ.

Books are considered the windows of the world. Through these windows the light of the knowledge and the fresh air wisdom get in to our lives. Whenever you are confused you can refer to them. They will free your mind from all kinds of confusion. **(Scores : 5)**

20. ಗೌಡ ಸಾರಸ್ವತ ಬ್ರಾಹ್ಮಣರ ತಿಂಡಿಯಾದ 'ಇಂಡ್ರಿಯ' ಕುರಿತು ಟಿಪ್ಪಣಿ ಬರೆಯಿರಿ. **(Scores : 5)**

21. 'ಗರಡಿ' ಮತ್ತು 'ಕಳರಿ' ಗಳೊಳಗಿನ ವ್ಯತ್ಯಾಸವೇನು ? **(Scores : 5)**

22. ದುಷ್ಟಬುದ್ಧಿಯ ಸಂಚು ಯಾವುದು ? ಅದು ವಿಫಲವಾಗಲು ಕಾರಣವೇನು ? **(Scores : 5)**

23. ಭಾಷಿಕ ವ್ಯತ್ಯಾಸಗಳು ಎಂದರೇನು ? ಮುಖ್ಯವಾದ ಭಾಷಿಕ ವ್ಯತ್ಯಾಸಗಳು ಯಾವುವು ? **(Scores : 5)**

24. ಕನ್ನಡ ನಾಟಕ ಸಾಹಿತ್ಯಕ್ಕೆ ಕೈಲಾಸಂ ಮತ್ತು ಕಾರ್ನಾಡರ ಕೊಡುಗೆಗಳೇನು ? **(Scores : 5)**

**(25 ಮತ್ತು 26 ನೇ ಪ್ರಶ್ನೆಗಳಲ್ಲಿ ಒಂದೊಂದನ್ನು ಆಯ್ದು ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ.)**

25. ಪರಿಸರ ಮಾಲಿನ್ಯ – ಕಾರಣ ಮತ್ತು ಪರಿಹಾರವನ್ನು ಸೂಚಿಸಿ ಲೇಖನವನ್ನು ಬರೆಯಿರಿ.

**ಅಥವಾ**

'ರಾಷ್ಟ್ರೀಯ ಹಬ್ಬಗಳ ಮೂಲಕ ಭಾವೈಕ್ಯ' ಎಂಬ ವಿಷಯದ ಕುರಿತು ಒಂದು ಪ್ರಬಂಧವನ್ನು ಬರೆಯಿರಿ. **(Scores : 8)**

26. ಮಂಥರಾ ನಾಟಕದಲ್ಲಿ ಮೂಡಿ ಬಂದ ಮಂಥರೆಯ ಪಾತ್ರ ಚಿತ್ರಣ ಮಾಡಿರಿ.

**ಅಥವಾ**

ಕೈಕೆಯಿ ಹೇಳಿದ ವರಗಳ ಬಗ್ಗೆ ಭರತನ ಪ್ರತಿಕ್ರಿಯೆಗಳೇನು ? ನಿಮ್ಮ ಮಾತಿನಲ್ಲಿ ವಿವರಿಸಿರಿ. **(Scores : 8)**

SECOND YEAR HIGHER SECONDARY EXAMINATION, ~~MARCH~~ SAY 2017

7041

**Part- III Kannada (Optional)**

| Qn. No | Sub Qns | Answer Key/Value Points | Score | Total |
|---|---|---|---|---|
| 1 | | ಪಂಪ | 1 | 1 |
| 2 | | ತದ್ಧಿತ ಪ್ರತ್ಯಯ | 1 | 1 |
| 3 | | ಕಮಲಲೋಚನ | 1 | 1 |
| 4 | | ರತ್ನಾಕರ ವರ್ಣಿ | 1 | 1 |
| 5 | | ಗ್ಯಾನ | 1 | 1 |
| 6 | | ಭೂಮಿ, ಇಳೆ, ಧರೆ | 1 | 1 |
| 7 | | ಪರಿಸರ ಸಂರಕ್ಷಣೆಯ ಕುರಿತು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು | 1 | 1 |
| 8 | | ಮಾವಿನ ಮರ | 1 | 1 |
| 9 | | ಬಿಲ್ಲು | 1 | 1 |
| 10 | | ದ್ರಾವಿಡ | 1 | 1 |
| 11 | | ಮಾಡ | 1 | 1 |
| 12 | | ಅಮೃತಮಯಂ+ ಎನಿಸುವ+ ಓಗರವ | 1 | 1 |
| 13 | | ಋಷಿಗಳು ಯಾರೂ ಅವಳಿಗೆ ಕಾಣಿಸಲಿಲ್ಲ. ಮಂಗ ಕೋಡಗದಂತ ಮುಖವುಳ್ಳವರು ಯಾರೋ ಇಬ್ಬರು ಅವಳ ಮುಂದೆ ನಿಂತಿರುವರು ಆದರೆ ಇವರ ನಡುವೆ ಸರ್ವಾಭರಣ ಸುಂದರನೂ, ವಿಶಾಲಾಕ್ಷನೂ, ಅಜಾನುಬಾಹುವೂ ಎತ್ತರವಾದ ಎದೆಯುಳ್ಳವನೂ ಆದ ಹದಿನಾರು ವರ್ಷದ ವರನೊಬ್ಬನಿರುವನು. ಆತನು ಅವಳ ಮನಸ್ಸನ್ನು ಸೆಳೆಯುತ್ತಿರುವನು. ಕಮಲದಂತಹ ಕಣ್ಣುಗಳಿಂದ ನನ್ನನ್ನೇ ನೋಡುತ್ತಿರುವನು. ದುಂಡು ಮಲ್ಲಿಗೆ ಮೊಗ್ಗಿನಂತಿರುವ ಆತನ ಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿದೆ. ಅಲ್ಲದೆ ಆತನು ಅವಳನ್ನು ವರಿಸಲು ಬಲಗೈನ್ನು ಮುಂದೆ ನೀಡಿರುವನು ಆದುದರಿಂದ ಅವಳು ಋಷಿಗಳನ್ನು ವರಿಸಲಿಲ್ಲ. | 2 | 2 |
| 14 | | ಗದ್ಯದಿಂದ ಪದ್ಯದ ಕಡೆಗೆ, ಕವನಗಳ ರಚನೆ, ಕವನ ರಚನೆಯಲ್ಲಿ ತ್ರಪ್ತಿ ಕಂಡದ್ದು | 3 | 3 |
| 15 | | ತುಳು ಜನರ ಭಾಷೆ ತುಳುವಾಗಿದ್ದರೂ ನಾಡಿನ ವ್ಯವಹಾರ ಭಾಷೆ ಕನ್ನಡವಾಗಿ ಬೆಳೆಯಿತು ಇದರಿಂದ ತುಳುವಿನಲ್ಲಿ ಶಿಷ್ಟ ಸಾಹಿತ್ಯ ರಚನೆ ವಿಪುಲವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ತುಳುವಿನಲ್ಲಿ ಶಿಷ್ಟ ಸಾಹಿತ್ಯ ಇಲ್ಲ ಎಂದೇ ತಿಳಿಯಲಾಗಿತ್ತು. ಶ್ರೀ ಭಾಗವತೋ ತುಳು ಕಾವ್ಯ ಬೆಳಕು ಕಾಣುವುದರೊಂದಿಗೆ ತುಳು ಸಾಹಿತ್ಯ ಚರಿತ್ರೆಯಲ್ಲಿ ಹೊಸ ಹೆಜ್ಜೆ ಗುರುತೊಂದು ಮೂಡಿತು. ಇದರಿಂದ ತುಳುವಿಗೆ ಅಭಿಜಾತ ಸಾಹಿತ್ಯ ಗೌರವ ದೊರಕಿದಂತಾಯಿತು. ಮೂರು ಸಾವಿರದಷ್ಟು ಶ್ಲೋಕಗಳಿಂದ ಕೂಡಿದ ತುಳು ಭಾಗವತೊ ಇಂದಿನ ತುಳು ಭಾಷೆಗಿಂತ ಭಿನ್ನವಾಗಿದೆ ಹಳೆಯ ತುಳು ಎಂಬುದೊಂದು ಇತ್ತು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಪಂಪನ ಕನ್ನಡಕ್ಕೆ ಸಮಾನವೆನ್ನಬಹುದು. ಅನಂತರ ಕಾವೇರಿ, ಗದ್ಯಕಾವ್ಯಗಳು ಪ್ರಕಟವಾದುವು ಇವೆಲ್ಲ ತುಳುವಿಗೆ ಶಿಷ್ಟ ಸಾಹಿತ್ಯ ಪರಂಪರೆ ಇತ್ತೆಂಬುದನ್ನು ದೃಢಪಡಿಸುತ್ತದೆ. | 4 | 4 |
| 16. | | ಇಳೆಯಾಂಡ ಗುಡಿಮಾರ ಲೌಕಿಕದಲ್ಲಿ ಕೃಷಿಯನ್ನು ಮಾಡುವವನು. ಅದರಲ್ಲಿ ಬೆಳೆದ ಬೆಳೆಯನ್ನು ಶಿವ ಭಕ್ತರಿಗೆ ದಾನ ಮಾಡಿ ಸಂತಸ ಪಡುತ್ತಿದ್ದನು. ಇರುವ ಭೂಮಿಯಲ್ಲಿ ಬಿತ್ತಿ ಬೆಳೆದು ಅದನ್ನು ಶರಣರಿಗೆ ನೀಡುವುದರಲ್ಲೇ ಕಿಂಕರ ಭಾವವನ್ನು ತಳೆಯುವನು ಗದ್ದೆಯಲ್ಲಿ ಬಿತ್ತಿದ ಬೀಜವನ್ನು ತಂದು ಹಸಿವನ್ನು ನೀಗಿಸುವುದು | 4 | 4 |
| | | | | |

| | | | | |
|---|---|---|---|---|
| 17 | | ನಿನ್ನಯ ತಾಯ್ ಸಾತ್ವತಿಯುಂ<br>ನಿನ್ನಂ ತಂದೆನ್ನ ತೊಡೆಯಮೇಲಿಟಿಪುವುದುಂ<br>ನಿನ್ನ ಲಲಾಟದ ಕಣ್ಣದು<br>ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೈಯೊಳ್,<br>ಕಂದ ಪದ್ಯ | 4 | 4 |
| 18 | | ಉಪಮಾ ಅಲಂಕಾರ<br>ಒಂದು ವಸ್ತುವನ್ನು ಬೇರೊಂದು ವಸ್ತುವಿನೊಡನೆ ಹೋಲಿಸುವುದು ಉಪಮೆ. ಉಮಪಮೆಯಲ್ಲಿ ಉಪಮೇಯ ಉಪಮಾನ, ಸಮಾನ ಧರ್ಮ ಮತ್ತು ಉಪಮಾವಾಚಕ ಎಂದು ನಾಲ್ಕು ಅಂಶಗಳಿರುತ್ತವೆ. ವರ್ಣಿಸುವ ವಸ್ತು ಉಪಮೇಯ, ನೀಡಲಾದ ಸಾದೃಶ್ಯ ಉಪಮಾನ, ಈ ಎರಡರಲ್ಲಿರುವ ಸಮಾನಾಂಶಗಳು ಸಮಾನ ಧರ್ಮ, ಅಂತೆ ಎಂಬುದು ಉಪಮಾವಾಚಕ | 5 | 5 |
| 19. | | ಶುದ್ಧವಾದ ಭಾಷಾಂತರಕ್ಕೆ, | 5 | 5 |
| 20. | | ಇಂಡ್ರಿಯು ದಕ್ಷಿಣ ಕನ್ನಡದಲ್ಲಿ ವಾಸವಾಗಿರುವ ಗೌಡಸಾರಸ್ವತ ಬ್ರಾಹ್ಮಣರು ತಯಾರಿಸುವ ಭಕ್ಷ್ಯ. ಸಿದ್ಧಪಡಿಸಲು ಇಡ್ಲಿಯ ತಟ್ಟೆಯನ್ನು ಬಳಸುತ್ತಾರೆ. ಆಕೃತಿಯಲ್ಲಿ ಇಡ್ಲಿಗೂ ಇಂಡ್ರಿಯ ಕ್ಕೂ ಸಾಮ್ಯತೆ ಇದೆ. ಈ ಹೆಸರು ಅದರ ಆಕೃತಿಗೆ ಸಂಬಂಧಿಸಿರಬೇಕು ಇಂಡ್ರಿ ಕೊಂಕಣಿ ಮೂಲದಿಂದ ಬಂದ ಹೆಸರು. ಚಕ್ರದತ್ತಾ ಕೃತಿಯಲ್ಲಿ ಇಂಡರಿಯ ಉಲ್ಲೇಖ. ಇಂಡರಿ ಮತ್ತು ಇಂಡ್ರಿ ಒಂದೇ ಮೂಲ. ಅಪಟೆಯವರು ನೀಡಿದ ವಿವರಣೆ. ಈ ಮುಂತಾದ ಅಂಶಗಳನ್ನು ಒಳಗೊಂಡಿರಬೇಕು | 5 | 5 |
| 21. | | ಗರಡಿ ಎಂದರೆ ವ್ಯಾಯಾಮ ಶಾಲೆ ಇದಕ್ಕೆ ಕೇರಳದಲ್ಲಿ ಕಳರಿ ಎನ್ನುವರು. ಇಲ್ಲಿ ಯುದ್ಧವಿದ್ಯೆಯನ್ನು ಕಲಿಸುತ್ತಿದ್ದರು. – ವ್ಯತ್ಯಾಸ ತಿಳಿಸಿದ್ದರೆ | 5 | 5 |
| 22. | | ಚಂದ್ರಹಾಸ ಕುಂತಳ ನಗರಕ್ಕೆ ರಾಜನಾಗುತ್ತಾನೆ ಎಂಬ ಭಯ ದುಷ್ಟಬುದ್ಧಿಗೆ. ಆತನ್ನು ವಧಿಸುವ ಉದ್ದೇಶದಿಂದ ಓಲೆಯೊಂದನ್ನು ಬರೆದು ಚಂದ್ರಹಾಸನ ಕೈಯಲ್ಲಿ ಕೊಟ್ಟು ತನ್ನ ಮಗನಾದ ಮದನನಿಗೆ ಕೊಟ್ಟು ಬರುವಂತೆ ಸೂಚಿಸುತ್ತಾನೆ. ಚಂದ್ರಹಾಸ ಓಲೆ ತೆಗೆದುಕೊಂಡು ಹೋಗುವುದು. ಉದ್ಯಾನವನದಲ್ಲಿ ನಿದ್ರಿಸುವುದು. ವಿಷಯೆ ಆ ಓಲೆಯನ್ನು ನೋಡುವುದು. ತಪ್ಪಾಗಿ ಬರೆದಿರಬಹುದೆಂದು ಭಾವಿಸುವುದು. ಕಿರುಬೆರಳಿಂದ ಓಲೆಯನ್ನು ತಿದ್ದುವುದು, ಓಲೆಯಲ್ಲಿದ್ದ ಬರವಣಿಗೆ , ವಿಷಯೆ ತಿದ್ದಿದ ರೀತಿ ಇತ್ಯಾದಿ ಅಂಶಗಳನ್ನು ಒಳಗೊಂಡಿರಬೇಕು | 5 | 5 |
| 23 | ಅ. | ಭಾಷಿಕ ವ್ಯತ್ಯಾಸಗಳು<br>ರೂಪಾಂತರ ಜೀವಂತ ಭಾಷೆಯ ಲಕ್ಷಣ. ಧ್ವನಿವ್ಯವಸ್ಥೆ, ಪದರಚನೆ, ವಾಕ್ಯರಚನೆ, ಕೋಶ ಮುಂತಾದವುಗಳ ಬದಲಾವಣೆ ನಿರಂತರ ನಡೆಯತ್ತದೆ ಭಾಷೆಯ ವಿಕಾಸದಲ್ಲಿ ಆದ ಬದಲಾವಣೆಗೊಂಡ ರೂಪಗಳನ್ನು ಆ ಭಾಷೆಯ ಹಂತಗಳೆಂದು ಗುರುತಿಸಲಾಗುತ್ತದೆ. ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ನಾಲ್ಕು ಹಂತಗಳು ಈ ಹಂತಗಳಲ್ಲಿ ಕನ್ನಡ ಭಾಷೆಯಲ್ಲಾದ ವ್ಯತ್ಯಾಸಗಳು, ಸೂಕ್ತವಾದ ಉದಾಹರಣೆಗಳು, ಭಾಷಿಕ ವ್ಯತ್ಯಾಸಗಳು– ಧ್ವನಿವ್ಯತ್ಯಾಸ, ಅರ್ಥವ್ಯತ್ಯಾಸ, ಸಾಮ್ಯಮೂಲ ವ್ಯತ್ಯಾಸ, ಸ್ವೀಕರಣ– ಉದಾಹರಣೆಗಳು ಒಳಗೋಡಿರಬೇಕು | 5 | 5 |
| 24 | | ಕನ್ನಡದ ನಾಟಕದಲ್ಲಿ ನವ್ಯ ಪರಂಪರೆ– ಕೈಲಾಸಂ ಅವರ ಪ್ರಯತ್ನ– ಅವರ ನಾಟಕಗಳು– ಯೋಚನೆಗಳು, ಕಾರ್ನಾಡರ ನಾಟಕಗಳು– ವಸ್ತು– ಪಾತ್ರ ನಿರ್ಮಾಣ ಇತ್ಯಾದಿಗಳನ್ನು ಒಳಗೊಂಡಿದ್ದು ನಾಟಕಗಳನ್ನು ಹೆಸರಿಸಿದ್ದರೆ | 5 | 5 |
| 25 | | ಶೀರ್ಷಿಕೆ, ಪೀಠಿಕೆ, ಕಾರಣ ಮತ್ತು ಪರಿಹಾರಗಳ ವಿವರಣೆ, ಉಪಸಂಹಾರ<br>ಭಾಷೆ, ಶೈಲಿ | 8 | 8 |

| | | | | |
|---|---|---|---|---|
| | | ಶೀರ್ಷಿಕೆ, ಪೀಠಿಕೆ, ಕಾರಣ ಮತ್ತು ಪರಿಹಾರಗಳ ವಿವರಣೆ, ಉಪಸಂಹಾರ<br>ಭಾಷೆ, ಶೈಲಿ | 8 | 8 |
| 26 | | ಮಂಥರಯ ವ್ಯಕ್ತಿತ್ವ, ಕುತಂತ್ರ, ಕೈಕೆಗೆ ಉಪದೇಶ ಭರತನ ಮೇಲಿನ ಮೋಹ ಇತ್ಯಾದಿ ಅಂಶಗಳು | 8 | 8 |
| | | ಯುವರಾಜ ಪದವಿಯ ನಿರಾಕರಣೆ, ಭರತ ಚಕ್ರವರ್ತಿಯಾಗುವುದಲ್ಲ ಮುಖ್ಯ<br>ಭರತನಾಗುವುಳಿಯುವುದೆ ಮುಖ್ಯ ಮಂಥರೆಯ ಮೇಲಿನ ಸಿಟ್ಟು ಇತ್ಯಾದಿ ವಿಚಾರಗಳು | 8 | 8 |